## ಸಪ್ತ ರಾತ್ರಂ ಕೃಷ್ಣವೇಣ್ಯಾಂ ಉಷಿತ್ವಾ ಪುನರುತ್ಥಿಥಂ।
## ಜಿತಾಮಿತ್ರಗುರುಂ ವಂದೇವಿಭುದೇಂದ್ರ ಕರೋಧ್ಭವಂ॥

### (ರಾಯರ ಮಠದ ೧೧ನೇ ಯತಿಗಳು)

# ಶ್ರೀ ಜಿತಾಮಿತ್ರತೀರ್ಥರು




**ಆಶ್ರಮ ನೀಡಿದ ಗುರುಗಳು– ಶ್ರೀ ವಿಬುದೇಂದ್ರತೀರ್ಥರು**

**ಇವರ ಶಿಷ್ಯರು – ಶ್ರೀ ರಘುನಂದನ ತೀರ್ಥರು,**

ಪೀಠಾಧಿಪತಿತ್ವ **ಕಾಲ – 1490 – 1493**

**ಸ್ಥಳ – ಶಿವಪುರ, ಗುಲ್ಬರ್ಗ**

**ಪೂರ್ವಾಶ್ರಮ ನಾಮ – ಅನಂತಪ್ಪ ,**



ಶ್ರೀಮದಾಚಾರ್ಯರ ತರುವಾಯ ಅದೃಶ್ಯರಾದ ಯತಿಗಳಲ್ಲಿ 3ನೇ ಯವರು.

**(ಮೊದಲನೆಯವರು ಶ್ರೀಮದಾಚಾರ್ಯರ ಪೂರ್ವಶ್ರಮದ ಸಹೋದರರಾದ ಶ್ರೀ ವಿಷ್ಣುತೀರ್ಥರು, ಎರಡನೆಯವರು ಶ್ರೀ ಬ್ರಹ್ಮಣ್ಯತೀರ್ಥರ ಗುರುಗಳಾದ ಶ್ರೀಪುರುಷೋತ್ತಮತೀರ್ಥರು.)**

## ೧. ಇವರ ಬಾಲ್ಯ –

**ಪ್ರತಿನಿತ್ಯ ಸಂಧ್ಯಾವಂದನೆ ಮಾಡಿದ ನಂತರ ಪ್ರಾಣಿಗಳನ್ನು ಮೇಯಿಸಿಕೊಂಡು ಹೊಲಕ್ಕೆ ಹೋಗಿ ಮಧ್ಯಾಹ್ನದವರೆಗೂ ಅಲ್ಲೇ ಇದ್ದು ಅನಂತರ ಮನೆಗೆ ಬಂದು ಸ್ನಾನ ಮಾಡಿ ನೈವೇದಿತ ಆಹಾರ ಸ್ವೀಕರಿಸಿ ಮತ್ತೆ ಹೊಲಕ್ಕೆ ಹೋಗಿ ಪ್ರಾಣಿಗಳನ್ನು ಮೇಯಿಸಿಕೊಂಡು ಸಂಜೆಯವರೆಗೂ ಅಲ್ಲೇ ಇದ್ದು ನಂತರ ಮನೆಗೆ ಬರುವ ಸಂಪ್ರದಾಯ.**

## ೨. ವಿಭುದೇಂದ್ರತೀರ್ಥರಿಂದ ಸಂರಕ್ಷಣೆ :

ಒಮ್ಮೆ ವಿಭುದೇಂದ್ರತೀರ್ಥರು ಇವರನ್ನು ಹೊಲದಲ್ಲಿ ಕಂಡಾಗ ಇವರ ಬಗ್ಗೆ ಬಹಳ ಆಕರ್ಷಿತರಾದರು. ಕೂಡಲೇ ಅವನ ಬಳಿಗೆ ಹೋದರು. ಅವನ ಕುತ್ತಿಗೆಯಲ್ಲಿ ಜನಿವಾರ ಕಾಣದಿರಲು, ಉಪನಯನವಾಗಿಲ್ಲವಾ ಎಂದು ಪ್ರಶ್ನಿಸಿದರು. ಆಗ ಅನಂತಪ್ಪ ಹೇಳಿದನು. ನನ್ನ ಜನಿವಾರವನ್ನು ಭೋಜನ ಮತ್ತು ಸಂಧ್ಯಾವಂದನೆಯ ಸಮಯದಲ್ಲಿ ಮಾತ್ರ ಉಪಯೋಗಿಸುತ್ತೇನೆ. ಉಳಿದ ಸಮಯದಲ್ಲಿ ಮನೆಯಲ್ಲಿ ಗೂಟಕ್ಕೆ ತಗಲಿ ಹಾಕಿರುತ್ತೇನೆ ಎಂದನು. (ಅನಂತಪ್ಪನಿಗೆ ಜನಿವಾರದ ಮಹತ್ವ ಗೊತ್ತಿರಲಿಲ್ಲ). ಆಗ ವಿಬುದೇಂದ್ರತೀರ್ಥರು ಅವನಿಗೆ ಜನಿವಾರದ ಮಹತ್ವವನ್ನು ವಿವರಿಸಿ, ಸಂಧ್ಯಾವಂದನೆ, ದೇವರಪೂಜೆ ಎಲ್ಲವನ್ನೂ ವಿವರವಾಗಿ ಹೇಳಿಕೊಟ್ಟರು.

## ೩. ಸಾಲಿಗ್ರಾಮ ಪ್ರಧಾನ :

ವಿಭುದೇಂದ್ರತೀರ್ಥರು ಅನಂತಪ್ಪನಿಗೆ ಒಂದು ನರಸಿಂಹ ಸಾಲಿಗ್ರಾಮವನ್ನು ಕೊಟ್ಟು, ಇದನ್ನು ಪ್ರತಿದಿನ ಪೂಜಿಸಿ, ಅಭಿಷೇಕಿಸಿ, ನೈವೇದ್ಯ ಮಾಡಿ, ನಂತರ ನಿನ್ನ ಕೆಲಸವನ್ನು ಮಾಡಿಕೊ ಎಂದು ಹೇಳಿದರು. ಅನಂತಪ್ಪನು ಪ್ರತಿದಿನ ಅದೇ ರೀತಿ ನಡೆಸಿಕೊಂಡು ಬರಲು ತೀರ್ಮಾನಿಸಿದನು. ಒಂದು ದಿನ ಅನಂತಪ್ಪನು ಪೂಜೆ ಮುಗಿಸಿ ನರಸಿಂಹ ದೇವರಿಗೆ ನೈವೇದ್ಯ ಸಮರ್ಪಿಸಲು ಹೋದಾಗ, ಎಷ್ಟೇ ಪ್ರಯತ್ನಿಸಿದರೂ ಅದು ಬಾಯಿ ತೆರೆಯಲಿಲ್ಲ. ಆಗ ಬೇಜಾರಾಗಿ ಆ ಸಾಲಿಗ್ರಾಮದಿಂದಲೇ ತನ್ನ ತಲೆಗೆ ಹೊಡೆದುಕೊಳ್ಳಲು ಉದ್ಯುಕ್ತನಾದನು. ಆಗ ಕರುಣಾಪೂರ್ಣ ಶ್ರೀಹರಿಯು ಬಾಯಿ ತೆಗೆದು ನೈವೇದ್ಯ ಸ್ವೀಕರಿಸಿದನು. ಏಕೆಂದರೆ ಇವರು ರುದ್ರಾಂಶರು. ಮನೋ ನಿಯಾಮಕ ರುದ್ರದೇವರ ಉಪಾಸನ ಮೂರ್ತಿ ನರಸಿಂಹದೇವರಲ್ಲವೆ.

೪. ಪ್ರವಾಹದಲ್ಲಿ ಏಳು ದಿನ ಮರೆಯಾಗಿದ್ದರು –

ಕೃಷ್ಣಾ ನದಿ ತೀರದಲ್ಲಿ ಶಿಷ್ಯರಿಗೆ ಪಾಠ ಹೇಳಿ ಕೊಡುವ ಸಂದರ್ಭ ನದಿಯಲ್ಲಿ ಭಾರೀ ಪ್ರವಾಹ ಬಂದಾಗ ದಡದ ಬದಿಯಲ್ಲಿದ್ದ ಎಲ್ಲ ಶಿಷ್ಯರೂ ಮರಳಿ ಮನೆಗೆ ಹೊರಟರು. ಆದರೆ ಮರದ ಬುಡದಲ್ಲಿ ಕುಳಿತಿದ್ದ ಶ್ರೀ ಜಿತಾಮಿತ್ರರು ಮಾತ್ರ ಆ ಸ್ಥಳ ಬಿಟ್ಟು ಹೊರಡಲಿಲ್ಲ. ಪ್ರವಾಹ ಒಂದು ವಾರವಿದ್ದರೂ ಕೂಡ ಅವರು ವಿಚಲಿತರಾಗಲಿಲ್ಲ. ಪೂರ್ತಿ ಪ್ರವಾಹ ಕಳೆದು ಒಂದು ವಾರದ ನಂತರ ಅಲ್ಲಿಗೆ ಜನರು ಬಂದು ನೋಡಿದಾಗ ಜಿತಾಮಿತ್ರರು ಮಾತ್ರ ಅಲ್ಲೇ ಅದೇ ಮರದ ಬುಡದಲ್ಲೇ ಕುಳಿತಿದ್ದರು. ಮತ್ತು ತಮ್ಮ ಕಡೆ ಗಳಿಗೆಗಾಗಿ ಅವರು ಅದೇ ಜಾಗವನ್ನು ಆಯ್ದುಕೊಂಡರು.

೫. ಒಮ್ಮೆ ಸುಶೀಲೇಂದ್ರತೀರ್ಥರು ಜಿತಾಮಿತ್ರರ ದರ್ಶನಕ್ಕೆ ಬಂದಾಗ, ಜಿತಾಮಿತ್ರರ ಗಡ್ಡೆಯ ಎದುರಿಗೆ ತಮ್ಮ ಸಂಸ್ಥಾನದ ಮೂಲ ರಾಮನ ಪೂಜೆಗೆ ಸಿದ್ದಗೊಳಿಸಿದರು. ಅದೇ ಸಮಯದಲ್ಲಿ ಒಬ್ಬ ಜಂಗಮ ವಿಭೂತಿ, ರುದ್ರಾಕ್ಷಿ ಧರಿಸಿ ಅಲ್ಲೇ ಬರುತ್ತಿರುವುದನ್ನು ಕಂಡರು. ಅದೇ ಜಂಗಮ ಸಂಜೆ ಗರ್ಭಗುಡಿಗೆ ಪ್ರವೇಶಿಸಿ ಅಲ್ಲೇ ಅಂತರ್ಧಾನನಾದನು. ಎಷ್ಟೇ ಪ್ರಯತ್ನಿಸಿದರೂ ಸಿಕ್ಕಲಿಲ್ಲ. ಮತ್ತೆ ಅದೇ ಜಂಗಮ ರಾತ್ರಿ ಅದೇ ಗಡ್ಡೆಯ ಹತ್ತಿರ ಕಂಡರು ಮತ್ತೆ ಅದೃಶ್ಯರಾದರು. ಆಗ ಶ್ರೀ ಸುಶೀಲೇಂದ್ರರು ಶ್ರೀ ಜಿತಾಮಿತ್ರರು ರುದ್ರದೇವರ ಅಂಶಸಂಭೂತರೆಂದು.

೬. 1945ರಲ್ಲಿ ಶ್ರೀ ಸುಯಮೀಂದ್ರತೀರ್ಥರು ಅದೇ ಮರದ ಹತ್ತಿರ ಪೂಜೆಗೆ ಕುಳಿತಿದ್ದರು. ಜಿತಾಮಿತ್ರರ ಗಡ್ಡೆಯನ್ನು ಬಹಳ ಸುಂದರವಾಗಿ ಅಲಂಕರಿಸಿದ್ದರು. ಪೂಜೆ ನಂತರ ಜಿತಾಮಿತ್ರರಿಗೆ ಹಸ್ತೋದಕ ಮತ್ತು ಮಂಗಳಾರತಿ ಮಾಡಿದರು. ಪೂಜೆ ಮುಗಿದ ನಂತರ ಒಂದು ದೊಡ್ಡ ಹಾರ ಮರದಿಂದ ಇವರ ಕೊರಳಿಗೆ ಬಂದು ಬಿತ್ತು.

**ಅದೃಶ್ಯ - ಸಶರೀರರಾಗಿ ಕೃಷ್ಣಾನದಿಯ ನಡುಗಡ್ಡೆಯಲ್ಲಿ ಜ್ಞಾನವೃಕ್ಷದಲ್ಲಿ ಅದೃಶ್ಯರಾಗಿದ್ದಾರೆ.**



ಜಿತಾಮಿತ್ರತೀರ್ಥರು ಕಡೇ ಬಾರಿಗೆ ಕಂಡುಬಂದಿದ್ದ ವೃಕ್ಷ.

ಸಂಗ್ರಹ – ನರಹರಿಸುಮಧ್ವ